ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾ.ಕ.ಗು/45/2015-16. ದಿನಾಂಕ:12-04-2016.

| ಅರ್ಜಿದಾರರು | ತಕರಾರುದಾರರು |
|---|---|
| 1)ಹೊನ್ನಪ್ಪ<br>2)ಚಿತ್ರಲಿಂಗಪ್ಪ<br>3)ಗಿರಿಹೂಲೇಪ್ಪ<br>4)ಭರಮವ್ವ ಗಂಡ ತ.ಭೀಮಪ್ಪ<br>5)ದಾಲಕ್ಷ್ಮಮ್ಮ ಗಂಡ ಬಸಪ್ಪ<br>6)ಕಾಟ್ರಹಳ್ಳಿ ಬಸಪ್ಪ ತಂದೆ ಲೇಟ್ ನಾಗಪ್ಪ<br>7)ದಾಸರ ಮಾಸ್ತೇಮ್ಮ ಗಂಡ ಲೇಟ್ ಮರಿಸ್ವಾಮಿ<br>ಬೆಳ್ಳಗಟ್ಟ ಗ್ರಾಮ ಕೂಡ್ಲಿಗಿ ತಾ | ತಿಮ್ಮಪ್ಪ ತಂದೆ ಲೇಟ್ ಸಣ್ಣ ತಿಮ್ಮಪ್ಪ<br>ಬೆಳ್ಳಗಟ್ಟ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಬೆಳ್ಳಗಟ್ಟ ಗ್ರಾಮದ ಸನಂ 463ಎಪೈಕಿ ವಿಸ್ತೀರ್ಣ 0-80 ಸೆಂಟ್ಸು ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಬೆಳ್ಳಗಟ್ಟ ಗ್ರಾಮದ ಸನಂ 463ಎಪೈಕಿ ವಿಸ್ತೀರ್ಣ 0-80 ಸೆಂಟ್ಸು ಜಮೀನನ್ನು ಸದರಿ ಗ್ರಾಮದ ದಾಸರ ಮಾಸ್ತೆಮ್ಮ ಗಂಡ ಲೇಟ್ ಮರಿಸ್ವಾಮಿ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಬೆಳ್ಳಗಟ್ಟ ಇವರು ನಮೂನೆ-21 ರ ನೋಟಿಸನ್ನು ದಿನಾಂಕ:-02-11-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ತಿಮ್ಮಪ್ಪ ತಂದೆ ಲೇಟ್ ಸಣ್ಣ ತಿಮ್ಮಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್. ನಂಬರ್: 04/2015-16. ದಿನಾಂಕ:-22-11-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ:-02-02-2016 ರಿಂದ 12-04-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ತಕರಾರುದಾರರು ಗೈರು ಹಾಜರಾಗಿರುತ್ತಾರೆ.ಅರ್ಜಿದಾರರು ಬೆಳ್ಳಗಟ್ಟ ಗ್ರಾಮದ ಸನಂ 463ಎಪೈಕಿ ವಿಸ್ತೀರ್ಣ 0-80 ಸೆಂಟ್ಸು ಜಮೀನು ನಮ್ಮ ಮಾವನವರಾದ ಗೊವಿಂದಪ್ಪ ತಂದೆ ದೊಡ್ಡ ತಿಮ್ಮಪ್ಪ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ಇವರು ದಿನಾಂಕ 01-10-1975 ರಂದು ಹಾಗೂ ನನ್ನ ಅತ್ತೇಯವರಾದ ದಾಸರ ನಾಗಮ್ಮ ಗಂಡ ಗೋವಿಂದಪ್ಪ ಇವರು ದಿನಾಂಕ 11-08-1980 ರಂದು ಮತ್ತು ನನ್ನ ಗಂಡನಾದ ಮರಿಸ್ವಾಮಿ ತಂದೆ ಗೋವಿಂದಪ್ಪ ಇವರು ದಿನಾಂಕ 01-12-1989 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಗೊವಿಂದಪ್ಪ ಇವರ ಹೆಸರನ್ನು ಕಡಿಮೆ ಮಾಡಿ ನನ್ನ ಹೆಸರನ್ನು ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅವರು ಸದರಿ ವಿವಾದಿತ ಜಮೀನಿನಲ್ಲಿ ಭಾಗ ಇದೇಯೇಂದು ತಕರಾರು ಅರ್ಜಿ ಸಲ್ಲಿಸಿ ವಿಚಾರಣೆಗೆ ಗೈರು ಹಾಜಾರಾಗಿರುತ್ತಾರೆ.

ದಿನಾಂಕ 12-04-2016 ರ ವಿಚಾರಣೆಯಲ್ಲಿ ಅರ್ಜಿದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನಲ್ಲಿ ಇನ್ನಿತರೇ ವಾರಸುದಾರರ ಹೆಸರುಗಳು ಪಹಣಿಯಲ್ಲಿ ಸೇರಿಸಬೇಕಾಗಿರುವುದರಿಂದ ಸದರಿ ನನ್ನ ಮನವಿಯನ್ನು ತಿರಸ್ಕರಿಸಿ ಗೋವಿಂದಪ್ಪ ಇವರ ಹೆಸರನ್ನು ಮುಂದುವರೆಸಲು ಹೇಳಿಕೆಯನ್ನು ನೀಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಅರ್ಜಿದಾರರು ತಮ್ಮ ಮನವಿಯನ್ನು ತಿರಸ್ಕರಿಸಿ ಯಥಾಸ್ಥಿತಿಯಂತೆ ಮುಂದುವರೆಸಲು ಹೇಳಿಕೆ ನೀಡಿರುವ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಬೆಳ್ಳಗಟ್ಟ ಗ್ರಾಮದ ಸನಂ 463ಎಪೈಕಿ. ವಿಸ್ತೀರ್ಣ 0-80 ಸೆಂಟ್ಸು ಜಮೀನಿನ ಅರ್ಜಿದಾರರು ತಮ್ಮ ಮನವಿಯನ್ನು ತಿರಸ್ಕರಿಸಬೇಕೇಂದು ಅರ್ಜಿ ಸಲ್ಲಿಸಿರುವ ಕಾರಣ ಯತಾಸ್ಥಿತಿಯಂತೆ ಮುಂದುವರಿಸಲು ಆದೇಶಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 12-04-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ದಾಸರ ಮಾಸ್ತೆಮ್ಮ ಗಂಡ ಲೇಟ್ ಮರಿಸ್ವಾಮಿ ಬೆಳ್ಳಗಟ್ಟ ಗ್ರಾಮ ಹಾಗೂ ಇತರರು ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ತಿಮ್ಮಪ್ಪ ತಂದೆ ಲೇಟ್ ಸಣ್ಣ ತಿಮ್ಮಪ್ಪ ಬೆಳ್ಳಗಟ್ಟ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.